**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 1041/2025**

ಫ್ರಾಸಾ – 2

ಚಾಸಾ – 1

**ಸಾಕ್ಷಿಯು ದಿಃ 04.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಮಲ್ಲಮ್ಮ |
| ಗಂಡನ ಹೆಸರು | : | ಮೂಗಪ್ಪ |
| ವಯಸ್ಸು | : | 68 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ತೋಟದ ಮನೆ, ದೇವರ ಹಳ್ಳಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ನನಗೆ ಓದು ಬರಹ ಬರುವುದಿಲ್ಲ.ಚಾಸಾ 2 ನನ್ನ ಮಗ. ಚಾಸಾ 3 ರಿಂದ 6 ಗೊತ್ತು. ಆರೋಪಿಗಳು ಗೊತ್ತು, ನಮ್ಮ ಪಕ್ಕದ ಜಮೀನಿನವರು. ಸಾಕ್ಷಿಯು ದೂರಿನಲ್ಲಿ ತಮ್ಮ ಹೆಬ್ಬೆಟ್ಟಿನ ಸಹಿ ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ 1 ಎಂದು ಗುರ್ತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿ ತಮ್ಮ ಹೆಬ್ಬೆಟ್ಟಿನ ಸಹಿ ನೋಡಿ ನೋಡಿ ಗುರುತಿಸಿದ್ದರಿಂದ, ಪಂಚನಾಮೆಯನ್ನು ನಿಪಿ 2 ಎಂದು ಗುರ್ತಿಸಲಾಯಿತು. ಸದರಿ ಸಹಿಗಳನ್ನು ಯಾವಾಗ ಎಲ್ಲಿ ಮಾಡಿದ್ದೇನೆ ನನಗೆ ಗೊತ್ತಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ಅಮಾನತ್ತು

ಪಡಿಸಿಕೊಂಡಿರುವುದಿಲ್ಲ. ಆರೋಪಿಗಳು ನನಗೆ ಅಕ್ರಮ ಪ್ರತಿಬಂಧ ಉಂಟು ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿರುವುದಿಲ್ಲ ಹಾಗೂ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ದಿಃ 04.09.2022 ರಂದು ಮಧ್ಯಾಹ್ನ 12.30ರ ಸಮಯದಲ್ಲಿ ಚಾಸಾ 2 ರವರ ಜಮೀನಿಗೆ ಹೊಂದಿಕೊಂಡಿರುವಂತಹ ಆರೋಪಿಗಳ ಜಮೀನಿನ ತೇವರಿಯಲ್ಲಿ ನಾನು ಚಾಸಾ 2 ರಿಂದ 4 ರವರು ಕೆಲಸ ಮಾಡುತ್ತಿದ್ದಾಗ, 1ನೇ ಆರೋಪಿಯ ಹಸು, ತಂತಿ ಬೇಲಿ ದಾಟಿ ಚಾಸಾ 2 ರವರ ಜಮೀನಿಗೆ ಬರುತ್ತಿರುವುದನ್ನು ನೋಡಿ ಹಸುವನ್ನು ಜಮೀನಿಗೆ ಬಾರದಂತೆ ಕಟ್ಟಿಹಾಕಲು 2ನೇ ಆರೋಪಿಗೆ ಹೇಳಲು ಹೋದಾಗ 2ನೇ ಆರೋಪಿ ನನ್ನನ್ನು ಅವಾಚ್ಯ ಶಬ್ಧಗಳಿಂದ ಬೈದು, 1 ಮತ್ತು 2ನೇ ಆರೋಪಿಗಳು ನನ್ನ ಕುತ್ತಿಗೆ ಹಿಡಿದು ಜಗ್ಗಾಡಿ, ಗಲಾಟೆ ಬಿಡಿಸಲು ಬಂದು ಚಾಸಾ 2 ರವರನ್ನು ಆರೋಪಿಗಳು ಅವಾಚ್ಯ ಶಬ್ಧಗಳಿಂದ ಬೈದು ಹೋಗುವಾಗ 1ನೇ ಆರೋಪಿ ದೊಣ್ಣೆಯಿಂದ ಚಾಸಾ 2 ರವರಿಗೆ ಹೊಡೆಯಲು ಪ್ರಯತ್ನಿಸಿದ್ದು, 2ನೇ ಆರೋಪಿ ತಲೆಯಿಂದ ಚಾಸಾ 2 ರವರ ಕಣ್ಣಿನ ಬಲಭಾಗಕ್ಕೆ, ಎದೆಗೆ ಹೊಡೆದು, ಚಾಸಾ 2 ಮತ್ತು ನನಗೆ ಆರೋಪಿಗಳಿಬ್ಬರೂ ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಈಗ ಓದಿ ಹೇಳಿದಂತೆ ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ದಿಃ 05.09.2022 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ ದೊಣ್ಣೆ ಮತ್ತು ಕಲ್ಲನ್ನು ವಶಪಡಿಸಿಕೊಂಡು ಸಹಿ

ಪಡೆದಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ಪ್ರಕರಣ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ನಿಪಿ 1 ಮತ್ತು 2ರ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ